ಶ್ರೀಮದ್ ಹನುಮದ್ಭೀಮ ಮಧ್ವಾಂತರ್ಗತ ಶ್ರೀರಾಮಕೃಷ್ಣ ವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀಗುರುರಾಜೋವಿಜಯತೇ ‖ ಹರಿಃ ಓಂ ‖

# ಗಾಯತ್ರೀ ಪ್ರಾಶಸ್ತ್ಯ

ಲೇಖಕರು : ಶ್ರೀ ಪಾಂಡುರಂಗಾಚಾರ್ಯ ಶ್ರೀನಿವಾಸಾಚಾರ್ಯ ವಾಯಿಕರ್, ಬೆಂಗಳೂರು.

ಸರ್ವೇಷಾಂ ಜಪಸೂಕ್ತಾನಾಂ ಗಾಯತ್ರೀ ಪರಮೋಮತಃ ।
ದುರ್ಲಭಾ ಸರ್ವಮಂತ್ರೇಷು ಗಾಯತ್ರೀ ಪ್ರಣವಾನ್ವಿತಾ ‖ ಬೃ. ಪಾರಾಶರ ‖
ವೇದಮಾತಾ ತು ಗಾಯತ್ರೀ ದ್ವಿಗುಣಾ ದ್ವಾದಶಾಕ್ಷರಾತ್ ‖ ತಂತ್ರಸಾರ ‖
ಗಾಯತ್ರೀಮಾತ್ರ ನಿಷ್ಣಾತೋ ದ್ವಿಜೋ ಮೋಕ್ಷಮವಾಪ್ನುಯಾತ್ ‖

ಈ ಮೇಲಿನ ಮತ್ತು ಈ ತರಹ ಅನೇಕ ಗಾಯತ್ರೀಪರ ವಾಕ್ಯಗಳನ್ನು

ನೋಡಿದರೆ, ಗಾಯತ್ರೀ ಎಂಬ ಮಂತ್ರವು ಅದೆಷ್ಟು ಮಹತ್ವ ಪೂರ್ಣವಾದದ್ದು ಎಂದು ಗೊತ್ತಾಗುತ್ತದೆ. ಚತುರ್ವೇದಗಳಲ್ಲಿ ಕಾಣತಕ್ಕ ಒಂದು ಪ್ರಾಮುಖ್ಯತೆ ಪಡೆದ ಮಂತ್ರ. ಸ್ಮೃತಿಗಳಲ್ಲಿ ಮತ್ತು ಋಷಿವಾಕ್ಯಗಳಲ್ಲಿ ಅನೇಕ ಕಡೆ ಗಾಯತ್ರಿಯ ಪ್ರಶಂಸೆ ಕಾಣಬಹುದು. ಆದ್ದರಿಂದ ಗಾಯತ್ರೀ ಎಂಬುದು ಕಿವಿಗೆ ಬಿದ್ದೊಡನೆ ಅದರ ಬಗ್ಗೆ ಸಾಮಾನ್ಯವಾಗಿಯೂ / ವಿಶೇಷವಾಗಿಯೂ ತಿಳಿಯಬೇಕೆಂಬ ಕುತೂಹಲ ಸಾಮಾನ್ಯವಾಗಿ ಎಲ್ಲ ಜಿಜ್ಞಾಸುಗಳಿಗೆ / ಮುಮುಕ್ಷುಗಳಿಗೆ ಉತ್ಪನ್ನವಾಗುತ್ತದೆ.

ಗಾಯತ್ರೀ ಮಂತ್ರಾನುಷ್ಠಾನಕ್ಕೆ ಪುರೋಭಾವಿಯಾಗಿ ಉಪನಯನ ಸಂಸ್ಕಾರವು ಅತ್ಯವಶ್ಯಕ. ಈ ಉಪನಯನ ಸಂಸ್ಕಾರವು ದ್ವಿಜ ಸಮಾಜಕ್ಕೆ ಸೀಮಿತವಾಗಿದೆ. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಈ ಮೂರು ವರ್ಣದವರಿಗೆ ದ್ವಿಜರೆಂಬ ಪ್ರತೀತಿ. ನಾಲ್ಕನೆಯ ವರ್ಣದವರಿಗೆ ಈ ಸಂಸ್ಕಾರವಿಲ್ಲದಿದ್ದರೂ, ಭಗವಂತನನ್ನು ಒಲಿಸಲು ನಾಮೋಚ್ಚಾರಣ, ಭಗವತ್ ಕಥಾಶ್ರವಣ ಮತ್ತು ಪರಿಚರ್ಯಾದಿ ವೃತ್ತಿ ಇತ್ಯಾದಿಗಳು ಇವೆ. ಈ ವರ್ಣಾಶ್ರಮ ವ್ಯವಸ್ಥೆಯು ನಮ್ಮ ಭಾರತ ಭೂಮಿಯನ್ನು ಬಿಟ್ಟರೆ ಇನ್ನಾವ ಖಂಡಗಳಲ್ಲಿಯೂ ಕಂಡುಬರುವುದಿಲ್ಲ. ಶೃತಿ, ಸ್ಮೃತಿಗಳಲ್ಲಿ ಉಕ್ತವಾದ ಸರ್ವಧರ್ಮಕರ್ಮಗಳೂ ವರ್ಣಾಶ್ರಮ ಸಾಪೇಕ್ಷಿತವಾಗಿದೆ. ಈ ಚಾತುರ್ವರ್ಣಾಶ್ರಮ ವ್ಯವಸ್ಥೆಯು ಈಚಿನದಲ್ಲ, ಭರತ ಖಂಡದಲ್ಲಿ ಬಹಳ ಪ್ರಾಚೀನಕಾಲದಿಂದಲೂ ಇದೆ. ವೇದಗಳಲ್ಲಿ, ಪುರಾಣಗಳಲ್ಲಿ ಮತ್ತು ಇತಿಹಾಸಗಳಲ್ಲಿ ಇದರ ಉಲ್ಲೇಖ ಮತ್ತು ಆಧಾರಗಳು ಹೇರಳವಾಗಿವೆ. ಉದಾಹರಣಾರ್ಥವಾಗಿ ಛಾಂದೋಗ್ಯ ಉಪನಿಷತ್ತಿನಲ್ಲಿ ಸತ್ಯಕಾಮನು

ಗುರುಕುಲ ಇಚ್ಛಿಸಿ ಹಾರಿದ್ರುಮ ಗೌತಮರ ಬಳಿ ಹೋದಾಗ, ಅವರು ಸತ್ಯಕಾಮನನ್ನು ಕುರಿತು ಮೊದಲು ಕೇಳಿದ ಪ್ರಶ್ನೆ ಏನೆಂದರೆ "ಕಿಂ ಗೋತ್ರಂ"? ನಿನ್ನ ಗೋತ್ರವೇನು? ಅಂದರೆ ಸರ್ವರಿಗೂ ಗುರುಕುಲ ವಾಸಕ್ಕೆ ಅವಕಾಶವಿಲ್ಲವೆಂದಹಾಗಾಯಿತು. ಶ್ರೀಮನ್ಮಹಾಭಾರತಾಂತರ್ಗತ "ವಿಷ್ಣುಸಹಸ್ರನಾಮ"ದ ಫಲಶ್ರುತಿಯಲ್ಲಿ, "ವೇದಾಂತಗೋಬ್ರಾಹ್ಮಣಸ್ಯಾತ್ ಕ್ಷತ್ರಿಯೋ ವಿಜಯೀ ಭವೇತ್ ॥ ವೈಶ್ಯೋ ಧನಸಮೃದ್ಧಿಸ್ಯಾತ್ ಶೂದ್ರಃ ಸುಖಮವಾಪ್ನುಯಾತ್ ॥" ಎಂದರೆ ವಿಷ್ಣುಸಹಸ್ರನಾಮವನ್ನು ಚಾತುರ್ವರ್ಣದವರು ಪಠಿಸಿದರೆ ಅಥವಾ ಶ್ರವಣ ಮಾಡಿದರೆ ಅವರವರ ವರ್ಣಗಳಿಗೆ ತಕ್ಕಂತೆ ವಿಭಿನ್ನ ಫಲಗಳು ದೊರೆಯುವುದು ಸ್ಪಷ್ಟವಾಗಿ ಕಾಣುತ್ತದೆ. ಎಲ್ಲರಿಗೂ ಏಕಪ್ರಕಾರ ಫಲವಿಲ್ಲ.

ಈ ಚಾತುರ್ವರ್ಣಗಳನ್ನು ಜನರು ತಮ್ಮಿಷ್ಟಕ್ಕೆ ತಾವೇ ಯಾವುದಾದರೊಂದು ಕಾಲದಲ್ಲಿ ಕಲ್ಪಿಸಿಕೊಂಡರೋ ಅಥವಾ ಇನ್ನಾರಾದರೂ ಮಾಡಿದರೋ ಮತ್ತೆ ಹೇಗಾಗಿರಬಹುದು ಎಂಬ ಕುತೂಹಲಕ್ಕೆ ಉತ್ತರವನ್ನು ಭಗವಾನ್ ಶ್ರೀಕೃಷ್ಣನಿಂದ ಭಾರತಾಂತರ್ಗತ ಭಗವದ್ಗೀತೆಯಲ್ಲಿ ಕಾಣಬಹುದು.

"ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ॥
ತಸ್ಯ ಕರ್ತಾರಮಪಿ ಮಾಂ ವಿಧ್ಯಕರ್ತಾರಮವ್ಯಯಂ " ॥ ಗೀತಾ ॥

ಮಾನವರ ಸಹಜ ಗುಣ, ಕರ್ಮ ಮಾಡತಕ್ಕ ಯೋಗ್ಯತೆ ಇವುಗಳನ್ನವಲಂಬಿಸಿ ಮಾನವ ಜನಾಂಗವನ್ನು ನಾಲ್ಕು ವಿಭಾಗವಾಗಿ

ವಿಂಗಡಿಸಿದ್ದೇನೆ. ಅದರ ಕರ್ತಾ ಮತ್ತು ಪೋಷಕನು ನಾನೇ ಆಗಿದ್ದೇನೆ" ಎಂದು ಭಗವದ್ವಾಕ್ಯ. ಚಾತುವರ್ಣಗಳು ಮಾಡತಕ್ಕ ಧರ್ಮಕರ್ಮಗಳು ಸ್ಪಷ್ಟವಾಗಿ ಭಾಗವತ, ಸ್ಕಾಂದ, ವಿಷ್ಣು ಇತ್ಯಾದಿ ಅನೇಕ ಪುರಾಣಗಳಲ್ಲಿ ಹೇಳಲ್ಪಟ್ಟಿದೆ. ಉಕ್ತ ಧರ್ಮಗಳಿಂದಲೇ ಚಾತುರ್ವರ್ಣದವರು ಮೋಕ್ಷವನ್ನು ಪಡೆಯುವರೆಂದು ಶ್ರೀಕೃಷ್ಣನ ಉಪದೇಶ.

"ಸ್ವೇಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇನರಃ " ॥ ೧೮-೪೫ ॥
"ಸ್ವಕರ್ಮಣಾತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ " ॥ ೧೮-೪೬ ॥
(ಗೀತಾ)

"ಜೀವರುಗಳು ತಮ್ಮ ತಮ್ಮ ವಿಹಿತ ವರ್ಣಾಶ್ರಮೋಚಿತ ಕರ್ಮಗಳನ್ನು ಮಾಡಿ ಹರಿತೋಷಣೆ ಪಡಿಸುವುದರಿಂದಲೇ ಮೋಕ್ಷವನ್ನು ಹೊಂದುತ್ತಾರೆ". ಇದೇ ವಿಷಯವನ್ನು ಗೀತಾ ತಾತ್ಪರ್ಯದಲ್ಲಿ ಶ್ರೀ ಮಧ್ವರು ಅಧಿಕ ಸ್ಪಷ್ಟೀಕರಿಸಿದ್ದಾರೆ.

"ಸ್ವವಿಹಿತ ವೃತ್ಯಾ ಭಕ್ತ್ಯಾ ಭಗವದಾರಾಧನಮೇವ ಪರಮೋಧರ್ಮಃ "
॥ ಗೀ.ತಾ॥

"ಆಯಾವರ್ಣದವರಿಗೆ ವಿಹಿತವಾದ ವೃತ್ತಿಯಿಂದ ಭಕ್ತಿಯಿಂದ ಭಗವದಾರಾಧನೆ ಮಾಡುವುದೇ ಮತ್ತು ತದ್ವಾರಾ ಹರಿತೋಷಣೆ ಪಡಿಸುವುದೇ ಸರ್ವೋತ್ಕೃಷ್ಟ ಧರ್ಮವಾಗಿದೆ."

ಈ ರೀತಿಯಾಗಿ ಭಗವತ್ ಸ್ಪಷ್ಟವಾದ ಈ ವರ್ಣಾಶ್ರಮಧರ್ಮಗಳು ಪ್ರಾಚೀನಕಾಲದಿಂದಲೂ ಅನೂಚಾನ ಪದ್ಧತಿಯಲ್ಲಿವೆ.

ಅಂತೂ ಉಪನಯನ ಸಂಸ್ಕಾರಕ್ಕೆ ಅರ್ಹತೆ ಇದ್ದ ದ್ವಿಜ ಬಾಲಕರಿಗೆ ಎಂಟು ವರ್ಷಕ್ಕೆ ಉಪನಯನ ಸಂಸ್ಕಾರ ಕಾಲಪ್ರಾಪ್ತವಾಗುತ್ತದೆ. ಉಪನಯನಾನಂತರ ಸಂಧ್ಯೋಪಾಸನೆ/ಗಾಯತ್ರೀ ಉಪಾಸನೆ, ವೇದಾಧ್ಯಯನ, ಅಧ್ಯಾಪನ, ಶಾಲಿಗ್ರಾಮ ಪೂಜಾದಿಗಳು, ಉಕ್ತ ವ್ರತ-ನಿಯಮಗಳು ಇತ್ಯಾದಿ ಅನೇಕ ಧರ್ಮಕರ್ಮಗಳಿಗೆ ಅವಕಾಶವಾಗುತ್ತದೆ.

ಪ್ರಕೃತ ನಾವು ವಿಚಾರ ಮಾಡತಕ್ಕ ಸಂಧ್ಯೋಪಾಸನೆ ಅಥವಾ ಗಾಯತ್ರೀ ಉಪಾಸನೆಯು ಯಾವನಾದರೊಬ್ಬ ಪುರುಷ ನಿಬಂಧಿತ ವಿಧಿಯಲ್ಲ. ಭಾರತ ದೇಶದಲ್ಲಿ ಯಾವನೊಬ್ಬ ಪುರುಷ ಪ್ರಣೀತ ಧರ್ಮಗಳು ಬಹುಕಾಲಬಾಳಲಿಲ್ಲ. ಒಬ್ಬರು ಹೇಳಿದ್ದನ್ನು ಇನ್ನೊಬ್ಬರು ವಿರೋಧಿಸಿದರು. ಉಭಯರಿಗೂ ಪ್ರಾಮಾಣ್ಯ ದೊರಕಲಿಲ್ಲ. ಧರ್ಮಾಧರ್ಮ, ದೇವ-ದೇವತೆಗಳು, ಸ್ವರ್ಗ-ನರಕ ಇತ್ಯಾದಿ ಅತೀಂದ್ರಿಯ ವಿಷಯಗಳಲ್ಲಿ ಪುರುಷ ಪ್ರಣೀತ ವಾಕ್ಯಗಳು ಪ್ರಮಾಣಪದವಿಗೇರಲಿಲ್ಲ. ವಿವಾದಕ್ಕೊಳಗಾದವು ಆದರೆ ವೇದೋಕ್ತ ಧರ್ಮಗಳು ಮಾತ್ರ ಚಿರಕಾಲ ಉಳಿದವು. ವೇದರಾಶಿಯು ಮಾತ್ರ ಎಂದಿನಿಂದಲೂ ಅಪೌರುಷೇಯವೆಂದೇ ಪ್ರಸಿದ್ಧಿ. ಹಾಗೆಂದರೇನೆಂದರೆ - ವೇದಗಳನ್ನು ಯಾರಾದರೂ ರಚಿಸಿದರೆಂಬುದಕ್ಕೆ ಪ್ರತ್ಯಕ್ಷಾದಿ ಪ್ರಮಾಣಗಳಿಲ್ಲ ಮತ್ತು ವಿಪ್ರಲಂಭಾದಿ ಮೂಲಗಳಿಲ್ಲ. ಅಂತಹ ಶಬ್ದ ರಾಶಿ. ವೇದಗಳಲ್ಲಿ ಉಕ್ತವಾದ ಅನುಷ್ಠಾನಗಳಿಗೆ ನಿಯಮೇನ ಫಲದೊರೆಯುವುದನ್ನು ಅಧಿಕಾರಿಗಳು ಮನಗಂಡರು. ಆಕಸ್ಮಿಕ ಫಲ ಪ್ರಾಪ್ತವಾಗದೇ ಹೋದರೆ ಕರ್ತೃ,

ಕರ್ಮ, ಕರಣಾದಿಗಳಲ್ಲಿ ವೈಗುಣ್ಯವಿದೆ ಎಂದು ನಿರ್ಧರಿಸಲ್ಪಟ್ಟಿತು. ಭಾರತ ದೇಶದಲ್ಲಿ ಸಕಲ ಶುಭಾಶುಭ ಷೋಡಶ ಕರ್ಮಗಳು ಆ ಸೇತು ಹಿಮಾಚಲದವರೆಗೆ ವೇದಾನುಸಾರಿಯಾಗಿಯೇ ಇವೆ. ಈ ಧಾರ್ಮಿಕ ಐಕಮತ್ಯವನ್ನು ನಮ್ಮ ಪ್ರಾಚೀನರು ಬಹು ಕಾಲದ ಹಿಂದೆಯೇ ಸಾಧಿಸಿದ್ದಾರೆ. ಅದೇ ವೈದಿಕ ಧರ್ಮವು ಇಂದಿಗೂ ಪ್ರಚಲಿತದಲ್ಲಿದೆ. ಧರ್ಮಕ್ಕೆ ವೇದವೇ ಮೂಲ.

"ವೇದಪ್ರಣಿಹಿತೋ ಧರ್ಮಃ ಅಧರ್ಮಸ್ತದ್ವಿಪರ್ಯಯಃ " ‖ ಭಾಗವತ ‖

"ವೇದವು ವಿಧಿಮುಖವಾಗಿ ಹೇಳಿದ್ದೆಲ್ಲ ಧರ್ಮ. ಆಚರಿಸತಕ್ಕದ್ದು. ನಿಷೇಧಮುಖವಾಗಿ ಹೇಳಿದ್ದೆಲ್ಲ ಅಧರ್ಮ. ತ್ಯಜಿಸತಕ್ಕದ್ದು. "

ಪ್ರಕೃತ ವೇದ ಘೋಷಿಸಿದ ಅನೇಕ ಆಚರಣೆಗಳಲ್ಲಿ "ಸಂಧ್ಯೋಪಾಸನೆ" ಅಥವಾ "ಗಾಯತ್ರೀ ಉಪಾಸನೆ" ಒಂದು ವಿಹಿತ ಕರ್ಮ. ಇದು ನಿತ್ಯಾಚರಣೆ.

"ಅಹರಹಃ ಸಂಧ್ಯಾಮುಪಾಸೀತ | ಪ್ರಾತರುತ್ಥಾಯ ಸಂಧ್ಯಾಮುಪಾಸೀತ | ಯಃ ಸಂಧ್ಯಾಮುಪಾಸತೆ ತಸ್ಯೈವ ಸಮುಪಾಸತೆ "‖ (ಋಕ್, ಯಜು, ಸಾಮ)

"ಮೂರು ಸಂಧಿಕಾಲಗಳಲ್ಲಿ, ಋಷಿಪರಂಪರಾಗತ, ಸಂಧ್ಯಾವಂದನಾಖ್ಯ ಕರ್ಮವನ್ನು ನಿತ್ಯದಲ್ಲಿ ಆಚರಿಸು. ಪ್ರಾತಃಕಾಲದಲ್ಲಿ ಎದ್ದೊಡನೆ ಸ್ನಾನ ಸಂಧ್ಯಾದಿಕರ್ಮಗಳಲ್ಲಿ ನಿರತನಾಗು. ಯಾವನು ಈ ಸಂಧ್ಯಾಖ್ಯಕರ್ಮವನ್ನು ಶ್ರದ್ಧಾಭಕ್ತಿಯಿಂದ ಅನುಷ್ಠಾನ ಮಾಡುವನೋ ಅವನು ಉತ್ಕೃಷ್ಟ ಉಪಾಸನೆಯಾದ ಪರಬ್ರಹ್ಮೋಪಾಸನೆಯನ್ನು ಮಾಡಿದಂತಾಗುವನು."

ಸಂಧ್ಯಾಖ್ಯಕರ್ಮವನ್ನು ಯಾವಾಗ ಎಂದರೆ ಆವಾಗ ಆಚರಿಸಕೂಡದು.

ಅದಕ್ಕೆ ಕಾಲ ನಿಯಮವಿದೆ. ಸಂಧಿಕಾಲವೆಂದರೆ -

ರಾತ್ರಿ - ಹಗಲು - ಸಂಧಿಕಾಲ ೧ - ಪ್ರಾತಃ ಸಂಧ್ಯಾಚರಣೆ

ಪೂರ್ವಾಹ್ನ - ಪರಾಹ್ನ - ಸಂಧಿಕಾಲ - ೨ - ಮಾಧ್ಯಾಹ್ನಿಕ ಸಂಧ್ಯಾಚರಣೆ

ಹಗಲು - ರಾತ್ರಿ - ಸಂಧಿಕಾಲ - ೩ - ಸಾಯಂಕಾಲ ಸಂಧ್ಯಾಚರಣೆ

ಈ ಮೂರು ಸಂಧಿಕಾಲಗಳಲ್ಲಿ ಮಾಡತಕ್ಕ ವೇದೋಕ್ತ ಪ್ರಾರ್ಥನಾ ಕ್ರಿಯೆಗೆ ಸಂಧ್ಯಾ ಎಂದು ಹೆಸರು.

ಒಂದು ಸಲ ಉಪನಯನವಾದ ವ್ಯಕ್ತಿಯು ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ/ಯತಿ ಈ ಯಾವುದೇ ಆಶ್ರಮದಲ್ಲಿರಲಿ, ಅವನಿಗೆ ಸಂಧ್ಯೋಪಾಸನೆ ಮಾತ್ರ ಆಜನ್ಮ ಆಚರಿಸತಕ್ಕ ಕರ್ಮವಾಗಿದೆ.

"ಮೌಂಜೀಬಂಧನ ಮಾರಭ್ಯಸಾಯಂ ಪ್ರಾತಶ್ಚ ಕಾಲಯೋಃ |
ಮಾಧ್ಯಾಹ್ನೇಪಿ ಚ ಕರ್ತವ್ಯಂ ಯಾವತ್ಪ್ರಾಣವಿಮೋಕ್ಷಣಾತ್ ||"

"ಉಪನಯನದಿಂದ ಆರಂಭಮಾಡಿ, ಸಾಯಂಕಾಲ, ಪ್ರಾತಃಕಾಲ ಮತ್ತು ಮಾಧ್ಯಾಹ್ನಿಕ ಸಂಧ್ಯೋಪಾಸನೆಯನ್ನು ಪ್ರಾಣವಿರುವವರೆಗೂ ನಿತ್ಯವೂ ಮಾಡಬೇಕು. "

ಮೇಲೆ ಹೇಳಿದಂತೆ ಕಾಲನಿಯಮವೇನೋ ನಿರ್ಧಾರವಾಯಿತು. ಸಂಧ್ಯಾಪುರೋಭಾವಿಯಾಗಿ ಮತ್ತು ಸಂಧ್ಯಾಂಗವಾಗಿ ಇನ್ನೊಂದು ನಿಯಮವಿದೆ. ಅದು ಶುಚಿ.

ಪ್ರಾತಃ ಸ್ನಾನವಿಲ್ಲದೇ ಯಾವ ವೈದಿಕ ಕರ್ಮಾಚರಣೆಯೂ ಉಕ್ತವಾಗಿಲ್ಲ. ಸಂಧ್ಯೋಪಾಸನೆಗೂ ಶುಚಿಯ ಸಾಪೇಕ್ಷೆ ಇದೆ. ಆದ್ದರಿಂದಲೇ ಸ್ನಾನ-ಸಂಧ್ಯಾ ಎಂಬ ವ್ಯವಹಾರ.

ಒಬ್ಬ ವೈದ್ಯನು (ಸರ್ಜನ್) ರೋಗಿಯನ್ನು ಮುಟ್ಟಿ ಚಿಕಿತ್ಸೆ ಮಾಡುವ ಮುನ್ನ ಕನಿಷ್ಟ ಏಳು ಸಲ ಸಾಬೂನಿನಿಂದ ಕೈತೊಳೆಯಬೇಕೆಂಬ ನಿಯಮವಿದೆ. ಈಗ ನೀವೇ ನೋಡಿ, ಒಬ್ಬ ಮನುಷ್ಯ ಸಾಮಾನ್ಯನನ್ನು (ಅದೂ ರೋಗಿ) ಮುಟ್ಟಲು ಇಷ್ಟು ಶುಚಿ ನಿಯಮವಿದ್ದಮೇಲೆ ದೇವತಾಕಾರ್ಯ ಆಚರಿಸಲು ಅದಿನ್ನೆಷ್ಟು ಶುಚಿಬೇಕು, ಎಂಬುದನ್ನು ಅಧಿಕಾರಿಗಳು ಊಹೆ ಮಾಡಿ ತಿಳಿದು ಯೋಗ್ಯ ಮತ್ತು ವಿಧ್ಯುಕ್ತ ರೀತಿ ಶುಚಿವಂತರಾಗಬೇಕು. ಸಂಧ್ಯೋಪಾಸನೆಯಲ್ಲಿ, ಗಾಯತ್ರಿಯ ಮೆಟ್ಟಲು ಮುಟ್ಟಬೇಕಾದರೆ, ಅಧಿಕಾರಿಗೆ ಕೇವಲ ಸ್ನಾನಶುಚಿಯೊಂದೇ ಸಾಲದು, ಶುಚಿತಮನಾಗಬೇಕು. ಇಲ್ಲಿಯೂ ಸಹ ಏಳು ಹಂತಗಳಲ್ಲಿ ಶುಚಿಯಾಗುತ್ತದೆ.

೧. ಮೃತ್ತಿಕಾಶೌಚ
೨. ಜಲಸ್ನಾನ ಸಂಕಲ್ಪಿತ, ಸದಾಚಾರ ಸ್ಮೃತ್ಯುಕ್ತ ವಿಧಿ.
೩. ಧ್ಯಾನಸ್ನಾನ (ಆಂತರಿಕಸ್ನಾನ)
೪. ಆಪೋಹಿಷ್ಠೇತಿಮಂತ್ರದಿಂದ ಮಾರ್ಜನ
೫. ವಾಮದೇವಋಷಿಮಂತ್ರದಿಂದ ಮಾರ್ಜನ
೬. ಶನ್ನೋದೇವಿ ಮಂತ್ರದಿಂದ ಮಾರ್ಜನ

೭. ಅಘಮರ್ಷಣ ಋಷಿ ಮಂತ್ರದಿಂದ ಪಾಪಪುರುಷ ವಿಸರ್ಜನ;

ಹೀಗೆ ಏಳು ಪ್ರಕಾರ ಶುಚಿಯಾದ ಮೇಲೆ ಸೂರ್ಯದೇವನಿಗೆ ಅರ್ಘ್ಯನಂತರ ಗಾಯತ್ರೀ ಮಂತ್ರ ಜಪ.

ಏನ್ರೀ, ಇಷ್ಟೆಲ್ಲ ಮಾಡಲು ದಿನವಿಡೀ ಇದೊಂದೇ ಕೆಲಸವಾದರೆ ಬೇರೆ ಬೇರೆ ಕಾರ್ಯಗಳ ಗತಿಯೇನು? ಎಂದರೆ - ಹಾಗಿಲ್ಲ. ಸಾಮಾನ್ಯ ಸ್ನಾನಾದಿಗಳನ್ನು ಮಾಡಲು ಎಷ್ಟು ಸಮಯ ಬೇಕೋ ಈಗಲೂ ಅಷ್ಟೇ ಸಮಯ. ಕರ್ಮೇಂದ್ರಿಯಗಳಿಂದ ನೀರಿನ ಸ್ನಾನವಾಗುತ್ತಿರುವಾಗಲೇ ಜ್ಞಾನೇಂದ್ರಿಯ ಮನಸ್ಸು ಸೇರಿ ಸಂಕಲ್ಪ ಇನ್ನಿತರ ಮಂತ್ರಗಳನ್ನು ಹೇಳುತ್ತ ಅಷ್ಟೇ ಸಮಯದಲ್ಲಿ ಉತ್ತಮ ಸ್ನಾನವಾಗುತ್ತದೆ. ನೂರೆಂಟು ಗಾಯತ್ರೀ ಜಪದೊಂದಿಗೆ ಸಂಧ್ಯಾವಂದನೆ ಮಾಡಲು ಕೇವಲ ೧೫-೨೦ ಮಿನಿಟುಗಳು ಸಾಕು. ಅಷ್ಟು ಸಮಯವೂ ಇಲ್ಲವೆಂದು ಹೇಳುವುದರಿಂದ ನಮ್ಮಿಂದ ನಾವೇ ವಂಚಿತರಾಗುತ್ತೇವೆ.

ಗಾಯತ್ರಿಯ ಮೂರುಪಟ್ಟು ನಾರಾಯಣ ಅಷ್ಟಾರ್ಕ್ಷರ ಮಂತ್ರ ಜಪ ಮಾಡಬೇಕೆಂಬ ನಿಯಮವಿರುವುದರಿಂದ ಸುಮಾರು ೧೫ ನಿಮಿಷಗಳು ಇನ್ನೂ ಜಾಸ್ತಿ ಬೇಕಾಗುವುವು. ದ್ವಿಜನಾಗಿ ಹುಟ್ಟಿದ ಮೇಲೆ ಅದೂ ಬ್ರಾಹ್ಮಣನಾದಲ್ಲಿ ಹಾಗೆ ಆಚರಿಸುವುದರಿಂದ ಇಹ, ಪರ ಸುಖ ಸಮೃದ್ಧಿಯನ್ನು ಬಾಳಿನಲ್ಲಿ ಶಾಂತಿಯನ್ನು ಪಡೆಯುವುದರಲ್ಲಿ ಸಂಶಯವೇ ಇಲ್ಲ.

ಸ್ನಾನಾನಂತರ ಊರ್ಧ್ವಪುಂಢ್ರಾದಿ ಧಾರಣೆಮಾಡಿ ತದನಂತರ ಸಂಧ್ಯಾಕಾರ್ಯಾರಂಭ.

ಸಂಧ್ಯೋಪಾಸನೆಯ ಮುಖ್ಯ ಅಂಗಗಳು: ಆಚಮನ, ಸಂಕಲ್ಪ, ಪ್ರಾಣಾಯಾಮ, ಮಾರ್ಜನ ಮಂತ್ರಗಳು, ಪಾಪಪುರುಷ ವಿಸರ್ಜನ, ಅರ್ಘ್ಯಪ್ರದಾನ, ಭೂತೋಚ್ಚಾಟನ, ಆಸನಶುದ್ಧಿ, ಪೃಥಿವೀಪ್ರಾರ್ಥನೆ, ಅಂಗನ್ಯಾಸ ಕರನ್ಯಾಸ, ಸವಿತೃ ಮಂಡಲ ಮಧ್ಯವರ್ತಿ, ನಾರಾಯಣಧ್ಯಾನ, ಆವಾಹನೆ, ಗಾಯತ್ರೀಜಪ, ದಿಙ್ನ ನಮಸ್ಕಾರ, ಗಾಯತ್ರೀ ಉದ್ವಾಸನೆ, ಸಕಲರಿಗೂ ಕ್ಷೇಮ ಕೋರಿಕೆ, ಗೋತ್ರಾದಿ ಸ್ಮರಣೆ, ಭಗವದರ್ಪಣ.

ಪ್ರಾಣಾಯಾಮ: ಒಂದು ನಿಯಮ ಅಥವಾ ಕ್ರಮವನ್ನನುಸರಿಸಿ ಶ್ವಾಸೋಛ್ವಾಸವನ್ನು ನಿಯಂತ್ರಣಗೊಳಿಸುವ ಕ್ರಿಯೆಗೆ ಪ್ರಾಣಾಯಾಮವೆಂಬ ಸಂಕೇತ. ಇದರಲ್ಲಿ ಪೂರಕ, ರೇಚಕ ಮತ್ತು ಕುಂಭಕವೆಂದು ಮೂರು ಭಾಗಗಳಿವೆ.

ಪ್ರಾಣಾಯಾಮ ಮಂತ್ರ: ಪ್ರಣವಸ್ಯ ಪರಬ್ರಹ್ಮ ಋಷಿ, ಪರಮಾತ್ಮ ದೇವತಾ, ದೈವೀ ಗಾಯತ್ರೀ ಛಂದಃ, ಪ್ರಾಣಾಯಾಮೇವಿನಿಯೋಗಃ -

"ಓಂ ಭೂಃ ಓಂ ಭುವಃ ಓಂ ಸುವಃ ಓಂ ಮಹಃ ಓಂ ಜನಃ ಓಂ ತಪಃ ಓಂ ಸತ್ಯಂ" - ಇವು ಸಪ್ತ ವ್ಯಾಹೃತಿಗಳು

"ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯಧೀಮಹಿ
ಧಿಯೋಯೋನಃಪ್ರಚೋದಯಾತ್" - ಇದು ಗಾಯತ್ರೀ
"ಓಂ ಆಪೋಜ್ಯೋತಿ ರಸೋಮೃತಂ ಬ್ರಹ್ಮಭೂರ್ಭುವಸ್ಸ್ವರೋಂ" - ಇದು ಶಿರಸ್
ಪ್ರಣವಸ್ಯೇತಿ ಮಂತ್ರದಲ್ಲಿ ಮೂರುಭಾಗಗಳಿವೆ ೧. ವ್ಯಾಹೃತಿ ೨. ಗಾಯತ್ರೀ
೩. ಶಿರಸ್. ಇವುಗಳನ್ನು ಪ್ರಾಣಾಯಾಮಕ್ರಿಯೆಯಲ್ಲಿ ಉಪಯೋಗಮಾಡುವಾ.

ಪ್ರಾಣಾಯಾಮವೆಂದರೆ ಮಂತ್ರವನ್ನು ಮನಸ್ಸಿನಲ್ಲಿ ಉಚ್ಚಾರ ಮಾಡುತ್ತ ಪೂರಕ, ಕುಂಭಕ, ರೇಚಕ ಕ್ರಿಯೆಗಳನ್ನು ಆಚರಿಸುವುದು.

ಪೂರಕ ಕ್ರಿಯೆ: ಬಲಗೈ ಅಂಗುಷ್ಟ ಬೆರಳು ತುದಿಯಿಂದ ಮೂಗಿನ ಬಲರಂಧ್ರವನ್ನು ಮುಚ್ಚಿ, ಎಡರಂಧ್ರದಿಂದ ವಾಯುವನ್ನು ಒಳಗೆ ಎಳೆಯುವುದು. ಶ್ವಾಸಕ್ರಿಯೆ. ಸಪ್ತ ವ್ಯಾಹೃತಿಗಳನ್ನು ಮನಸಾ ಜಪಮಾಡುವುದು.

ಕುಂಭಕ ಕ್ರಿಯೆ: ಪೂರಕ ಕ್ರಿಯೆಯಿಂದ ಒಳಗೆ ತುಂಬಿದ ವಾಯುವು ಹೊರಗೆ ಹೋಗದಂತೆ, ಬಲಗೈ ಮಧ್ಯಮ ತರ್ಜನೀ ಬೆರಳುಗಳಿಂದ ಮೂಗಿನ ಎಡರಂಧ್ರವನ್ನು ಮುಚ್ಚಿ ವಾಯುವನ್ನು ಒಳಗೆ ಅನಾಯಾಸವಾಗಿ ಸ್ಥಿರವಾಗಿ ಇಟ್ಟಿರುವುದು. ಈ ಕಾಲದಲ್ಲಿ "ಗಾಯತ್ರೀ" ಮನಸಾಜಪಿಸುವುದು.

ರೇಚಕ ಕ್ರಿಯೆ: ಕುಂಭಕ ಕ್ರಿಯೆಯಲ್ಲಿ "ಗಾಯತ್ರೀ" ಜಪಕಾಲಾನಂತರ, ಬಲಗೈ ಅಂಗುಷ್ಟ ಬೆರಳನ್ನು ತೆಗೆದು ಮೂಗಿನ ಬಲರಂಧ್ರದಿಂದ ವಾಯುವನ್ನು

ಸಾವಕಾಶವಾಗಿ ಹೊರಗೆ ಹಾಕುವುದು. ಉಛ್ವಾಸ ಕ್ರಿಯೆ. ಈ ಕಾಲದಲ್ಲಿ "ಶಿರಸ್ಸ"ನ್ನು ಮನಸಾ ಜಪಿಸುವುದು.

ಪ್ರಾಣಾಯಾಮ ಮಂತ್ರವನ್ನು (ವ್ಯಾಹೃತಿ + ಗಾಯತ್ರೀ + ಶಿರಸ್) ಮನಸಾಜಪಿಸುತ್ತ ಪೂರಕ, ಕುಂಭಕ, ರೇಚಕ ಕ್ರಿಯಗಳನ್ನು ಒಂದು ಸಲ ಆಚರಿಸಿದರೆ ಒಂದು ಪ್ರಾಣಾಯಾಮ.

ಪೂರಕ + ಕುಂಭಕ + ರೇಚಕ
ವ್ಯಾಹೃತಿ + ಗಾಯತ್ರೀ + ಶಿರಸ್
= ಒಂದು ಪ್ರಾಣಾಯಾಮ.

ಒಂದು ಪ್ರಾಣಾಯಾಮದ ಪರಿಮಿತಿ ೩೦ ರಿಂದ ೪೦ ಸೆಕೆಂಡ್ ಆಗಬಹುದು. ಸಂಖ್ಯೆ ಸುಮಾರು ೧೦ ರಿಂದ ಕ್ರಮವಾಗಿ ವೃದ್ಧಿಮಾಡಿ ೧೦೮ ರವರೆಗೆ  ಮಾಡಬಹುದು. ಅಧಿಕ ಸಂಖ್ಯಾ ಪ್ರಾಣಾಯಾಮಕ್ಕೆ ಅಧಿಕ ಲಾಭ, ಅಧಿಕ ಫಲ.

ಮಂತ್ರಾರ್ಥಾನುಸಂಧಾನದಿಂದ ಪ್ರಾಣಾಯಾಮಕ್ರಿಯೆ ಆಚರಿಸಿದರೆ ಅದು ಸಗರ್ಭ ಪ್ರಾಣಾಯಾಮವಾಗುವುದು. ಧ್ಯಾನಕ್ಕೆ ಸಮ.

ಪ್ರಾಣಾಯಾಮವು ದೇಹಕ್ಕೆ ಬಲ ಕೊಡುತ್ತದೆ. ರೋಗಗಳನ್ನು ದೂರ ಓಡಿಸುತ್ತದೆ. ಮನಸ್ಸಿಗೆ ಧೈರ್ಯ ಸ್ಥೈರ್ಯಗಳನ್ನು ಕೊಡುತ್ತದೆ. ಮನಸ್ಸನ್ನು

ಒಂದು ವಿಷಯದಲ್ಲಿ ಕೇಂದ್ರೀಕರಿಸುತ್ತದೆ. ದೈಹಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಪ್ರಗತಿಗೆ ಮೂಲಭೂತವಾಗಿದೆ. ಸಮಾಜದಲ್ಲಿ ನಮ್ಮ ತಮ್ಮಂದಿರು ಈ ವಿಷಯದಲ್ಲಿ ಉದಾಸೀನ ಮಾಡದೇ ಪ್ರಾಣಾಯಾಮ ಅನುಷ್ಠಾನ ಮಾಡಿ ಅದರಿಂದ ಅಮೂಲ್ಯ ಲಾಭ ಪಡೆಯಬೇಕು ಎಂದು ಸೂಚನೆ.

ಪ್ರಥಮ ಕ್ರಿಯೆಯಾದ ಪ್ರಾಣಾಯಾಮದ ನಂತರ, ಸಂಧ್ಯಾಕ್ರಿಯೆ ಹಂತಹಂತವಾಗಿ ಮುಂದುವರಿದು ಮುಖ್ಯಭಾಗವಾದ "ಗಾಯತ್ರೀ" ಜಪಕ್ಕೆ ತಲುಪುತ್ತೇವೆ. ಅದರ ಬಗ್ಗೆ ಸ್ವಲ್ಪ ವಿಚಾರ ಮಾಡುವಾ.

ಗಾಯತ್ರೀ ಜಪ: ಗಾಯತ್ರೀ ಎಂಬುದು ಕೇವಲ ಛಂದಸ್ಸಿನ ಹೆಸರಲ್ಲ. ಅಥವಾ ನಾವು ಉಪಾಸನೆ ಮಾಡುವುದು "ಗಾಯತ್ರೀ" ಎಂಬ ಸ್ತ್ರೀದೇವತೆಯನ್ನೂ ಅಲ್ಲ. ಗಾಯತ್ರೀ, ಸಾವಿತ್ರೀ, ಸರಸ್ವತಿಯರು ಸಂಧ್ಯಾಭಿಮಾನಿ ದೇವತೆಗಳು. ನಾವು ಉಪಾಸನೆ ಮಾಡುವುದು ಸವಿತೃ ಮಂಡಲ ಮಧ್ಯವರ್ತಿ ನಾರಾಯಣನನ್ನು. "ಗಾಯಂತಾನ್ ತ್ರಾಯತೇ ಇತಿ ಗಾಯತ್ರೀ ನಾಮಾ ವಿಷ್ಣುರೇವ." ಆದ್ದರಿಂದ ಇದು ವಿಷ್ಣುವಿನ ಅಥವಾ ನಾರಾಯಣನ ಉಪಾಸನೆ.

ಮಂತ್ರ: ಓಂ । ಭೂರ್ಭುವಸ್ವಃ । ತತ್ಸವಿತುರ್ವರೇಣ್ಯಂ ।
ಭರ್ಗೋದೇವಸ್ಯಧೀಮಹಿ । ಧಿಯೋಯೋನಃ ಪ್ರಚೋದಯಾತ್ ॥

ಬ್ರಹ್ಮಚಾರಿ ಗೃಹಸ್ಥರು ಮೇಲೆಹೇಳಿದಂತೆ ಏಕಓಂಕಾರ, ಮೂರುವ್ಯಾಹೃತಿಗಳೊಡನೆ ವಿಭಾಗ ಮಾಡಿದ ಐದು ಸ್ಥಳಗಳಲ್ಲಿ ನಿಲ್ಲಿಸಿ

ಗಾಯತ್ರೀ ಜಪವನ್ನು ಆಚರಿಸಬೇಕು.

ಗಾಯತ್ರೀ ಮಂತ್ರದ ಸಾಮಾನ್ಯ ಅರ್ಥ ಈ ರೀತಿ ಇದೆ: ಓಂ - ಗುಣಪೂರ್ಣನಾದ, ಭೂಃ - ನಿತ್ಯನಾದ, ಭುವಃ - ಸೃಷ್ಟಿಕರ್ತನಾದ, ಸುವಃ - ಸ್ವತಂತ್ರನಾದ, ಸುಖರೂಪನಾದ, ಯಃ - ಯಾವ ಪರಮಾತ್ಮನು, ನಃ - ನಮ್ಮ, ಧಿಯಃ - ಬುದ್ಧಿ ಕರ್ಮಾದಿಗಳನ್ನು, ಪ್ರಚೋದಯಾತ್ - ಪ್ರೇರಿಸುತ್ತಾನೋ, ಸವಿತುಃ - ಅಂಥ ಸೃಷ್ಟಿಕರ್ತನಾದ, ದೇವಸ್ಯ - ಕ್ರೀಡಾದಿಗುಣ ವಿಶಿಷ್ಟನಾದ, ದೇವೋತ್ತಮನಾದ ಪರಮಾತ್ಮನ, ತತ್ - ಸದಾ ಸರ್ವತ್ರ ಇರತಕ್ಕ, ವರೇಣ್ಯಂ - ಶ್ರೇಷ್ಠರಿಂದ ಭಜನೀಯನಾದ, ಭರ್ಗಃ - ಜೀವನಿಗೆ ಜ್ಞಾನಾನಂದ ಕೊಡತಕ್ಕ, ತೇಜೋಮಯರೂಪವನ್ನು, ಭರಣ ಗಮನ ಕರ್ತನಾದ ಭಗವಂತನ ರೂಪವನ್ನು, ಧೀಮಹಿ - ಧ್ಯಾನಮಾಡುತ್ತೇವೆ. ಮಂತ್ರ ಪಠಿಸುವಾಗ ಇಷ್ಟು ಸಾಮಾನ್ಯಾರ್ಥ ಮನಸ್ಸಿಗೆ ಬಂದರೆ ಸಾಕು.

ಗಾಯತ್ರ್ಯರ್ಥ ವ್ಯಾಸೋಕ್ತ :

ಯೋ ದೇವಃ ಸವಿತೋಽಸ್ಮಾಕಂ ಧಿಯೋಧರ್ಮಾದಿ ಗೋಚರಾಃ ।
ಪ್ರೇರಯೇತ್ತಸ್ಯ ಭರ್ಗಸ್ಯ ತದ್ವರೇಣ್ಯಮುಪಾಸ್ಮಹೆ ॥

ಸವಿತೃ ಮಂಡಲ ಮಧ್ಯದಲ್ಲಿರತಕ್ಕ ಯಾವದೇವನು ಜ್ಞಾನಕರ್ಮಾದಿಗಳನ್ನು ಪ್ರೇರೇಪಿಸುತ್ತನೋ ಅಂಥ ಜಗತ್ಪೋಷಕ ಚಾಲಕನಾದವನನ್ನು ಮತ್ತು ಜ್ಞಾನಿಗಳಿಂದ ಭಜನೀಯನಾದ

ಶ್ರೀಮನ್ನಾರಾಯಣನ ದಿವ್ಯರೂಪವನ್ನು ಗಾಯತ್ರೀಮಂತ್ರದಿಂದ ಧ್ಯಾನಮಾಡುತ್ತೇವೆ. ಇದು ಮನಸ್ಸಿಗೆ ತತ್ಕಾಲದಲ್ಲಿ ಬರತಕ್ಕ ಭಾವಾರ್ಥ.

ಗಾಯತ್ರ್ಯರ್ಥಮಧ್ವೋಕ್ತಃ : ಶ್ರೀಮದಾಚಾರ್ಯರು ಋಗ್ಭಾಷ್ಯದಲ್ಲಿ ಹೇಳಿದ ಗಾಯತ್ರ್ಯರ್ಥ ಹೀಗಿದೆ : - "ಓಮಶೇಷ ಗುಣಾಧಾರ ಇತಿ ನಾರಾಯಣೋಪ್ಯಸೌ । ಪೂರ್ಣೋರ್ಭೂತಿ ವರೋನಂತ ಸುಖೋವ್ಯಾಹೃತಿರೀರಿತಃ । ಗುಣೈಸ್ತತಃಪ್ರಸವಿತಾ ವರಣೀಯೋಗುಣೋನ್ನತೇಃ । ಭಾ - ರತಿ - ಜ್ಞಾನರೂಪತ್ವಾದ್ಭರ್ಗೋ ಧೇಯೋಖಿಲೈರ್ಜನೈಃ । ಪ್ರೇರಕೋ ಶೇಷಬುದ್ಧೀನಾಂ ಸ ಗಾಯತ್ರ್ಯರ್ಥ ಈರಿತಃ ।"

ಓಂಕಾರ ಶಬ್ದದಿಂದ ಗುಣಪೂರ್ಣವಾಚಕ ನಾರಾಯಣನೇ. ಅವನೇ ಪೂರ್ಣನೂ, ಮಹದೈಶ್ವರ್ಯ ಉಳ್ಳವನೂ ಮತ್ತು ಅನಂತ ಸುಖವುಳ್ಳವನೆಂದೂ ವ್ಯಾಹೃತ್ಯರ್ಥ. ಪ್ರಣವಾರ್ಥವನ್ನೇ ವ್ಯಾಹೃತಿಗಳು ಹೇಳುತ್ತವೆ. ಈತನು ಜಗಜ್ಜನಕನೂ ಭಜನೀಯನೂ ಆಗಿದ್ದಾನೆ. ದೀಪ್ತಿಉಳ್ಳವನೂ ಕ್ರೀಡಾದಿಗುಣವಿಶಿಷ್ಟನೂ ಆದ ನಾರಾಯಣನನ್ನು ಧ್ಯಾನ ಮಾಡುತ್ತೇವೆ. ಈತನೇ ಸಕಲರಿಗೂ ಅಶೇಷ ಬುದ್ಧ್ಯಾದಿಗಳನ್ನು ಪ್ರೇರಿಸುತ್ತಾನೆ.

ಗಾಯತ್ರ್ಯರ್ಥ ಬೃಹದಾರಣ್ಯಕೋಕ್ತಃ - ಬೃಹದಾರಣ್ಯಕೋಪನಿಷತ್ - ಇದಕ್ಕೆ ಭಾಷ್ಯ ಟೀಕಾಗಳಲ್ಲಿಯೂ ಗಾಯತ್ರ್ಯರ್ಥವು ಉಕ್ತವಾಗಿದೆ. "ಭೂಮಿಹತರಿಕ್ಷಂದ್ಯೌ " ಇವು ಎಂಟು ಅಕ್ಷರ. ಪಾದಪ್ರತಿಪಾದ್ಯ - ಅನಿರುದ್ಧ

"ತತ್ಸವಿತುರ್ವರೇಣ್ಯಂ " ಎಂಬ ಗಾಯತ್ರಿಯ ಪ್ರಥಮ ಪಾದದ ಅರ್ಥ.

"ಋಚೋಯಜೂಂಷಿಸಾಮಾನಿ" ಇವು ಎಂಟು ಅಕ್ಷರ. ಪಾದಪ್ರತಿಪಾದ್ಯ - ಪ್ರದ್ಯುಮ್ನ

"ಭರ್ಗೋದೇವಸ್ಯಧೀಮಹಿ" ಎಂಬ ಗಾಯತ್ರಿಯ ದ್ವಿತೀಯ ಪಾದದ ಅರ್ಥ.

"ಪ್ರಾಣೋಪಾನವ್ಯಾನ" ಇವು ಎಂಟು ಅಕ್ಷರ. ಪಾದಪ್ರತಿಪಾದ್ಯ - ಸಂಕರ್ಷಣ

"ಧಿಯೋಯೋನಃಪ್ರಚೋದಯಾತ್" ಎಂಬ ಗಾಯತ್ರಿಯ ತೃತೀಯ ಪಾದದ ಅರ್ಥ.

"ಪರೋರಜಾಯಏಷತಪತಿ" . ಪಾದಪ್ರತಿಪಾದ್ಯ - ವಾಸುದೇವ.

ತುರೀಯಪಾದವಾದ 'ಓಂ' ಕಾರದ ಅರ್ಥ. (ವಿವರಣೆಗೆ ಭಾಷ್ಯ ಟೀಕಾಗಳನ್ನು ಅವಲೋಕಿಸುವುದು).

ಹೀಗೆ ಮೇಲೆ ಹೇಳಿದ ಇನ್ನೂ ಅನೇಕ ಪ್ರಕಾರ ಸುಂದರವಾದ ಅರ್ಥವನ್ನು ಹೊಂದಿದ ಗಾಯತ್ರಿಯು ಇತರ ಮಂತ್ರಗಳಂತೆ ಒಂದು ನಾಮ ಮಂತ್ರವಲ್ಲ. ಇದೊಂದು ಪ್ರಾರ್ಥನಾ ರೂಪವಾದ ಮಂತ್ರ. ಭಗವನ್ಮಹಿಮಾ ಪೂರ್ವಕ ಮತ್ತು ಪರಮಾತ್ಮನು ಜೀವರುಗಳಿಗೆ ಮಾಡತಕ್ಕ ಪ್ರೇರಣಾದಿ ಅನಿಮಿತ್ತೋಪಕಾರ ರೂಪಕಾರ್ಯಗಳು - ಅಂಥ ಭಗವಂತನನ್ನು ಕೃತಜ್ಞತಾಪೂರ್ವಕ ಸ್ಮರಣೆ ಮಾಡುವ ಒಂದು ವೇದೋಕ್ತ ವೀರ್ಯವತ್ತಾದ ಮಂತ್ರ.

ಗಾಯತ್ರೀಮಂತ್ರ ಜಪವನ್ನು ಸಾವಿರ, ಶತ ಅಥವಾ ದಶ ಸಂಖ್ಯಾದಲ್ಲಿ ಉತ್ತಮ, ಮಧ್ಯಮ ಮತ್ತು ಕನಿಷ್ಟ ಸಂಖ್ಯಾ ಎಂದು ಕ್ರಮವಾಗಿ ಹೇಳಲ್ಪಟ್ಟಿದೆ.

ಗಾಯತ್ರೀ ಜಪದ ಮೂರರಷ್ಟು ನಾರಾಯಣ ಅಷ್ಟಾಕ್ಷರ ಜಪ ಮಾಡುವ

ನಿಯಮವಿದೆ.

ಗಾಯತ್ರೀ ಮಂತ್ರದಲ್ಲಿ ಇಪ್ಪತ್ತನಾಲ್ಕು ಅಕ್ಷರಗಳಿವೆ. ತ, ತ್ಸ, ವಿ ...... ಯಾತ್. ಒಂದೊಂದಕ್ಷರಕ್ಕೂ ಕೇಶವ, ನಾರಾಯಣ, ಮಾಧವಾದಿ... ಶ್ರೀಕೃಷ್ಣ ಪರ್ಯಂತ ನಿಯಾಮಕ ೨೪ ಭಗವದ್ರೂಪಗಳಿವೆ. ಗಾಯತ್ರಿಯ ಪಾಪನಾಶಕ ಶಕ್ತಿ ಅಪಾರ.

ದಶಭಿರ್ಜನ್ಮ ಜನಿತಂ ಶತೇನ ಚ ಪುರಾಕೃತಂ |

ಸಹಸ್ರೇಣ ತ್ರಿಜನ್ಮೋಯಂ ಗಾಯತ್ರೀ ಹಂತಿ ದುಷ್ಕೃತಮ್ ||

ಗಾಯತ್ರಿಯ ಹತ್ತು ಜಪದಿಂದ ಇಹ ಜನ್ಮದ, ನೂರುಜಪದಿಂದ ಪೂರ್ವಜನ್ಮದ, ಮತ್ತು ಸಹಸ್ರ ಜಪಗಳಿಂದ ಹಿಂದಿನ ಮೂರು ಜನ್ಮದ ಪಾಪವು ನಾಶವಾಗುತ್ತದೆ.

ಗಾಯತ್ರಿಯ ಒಂದೊಂದು ಅಕ್ಷರಕ್ಕೂ ವಿಧವಿಧವಾದ ಪಾಪ ನಾಶಕ ಶಕ್ತಿ ಇದೆ. ಈ ವಿಷಯ ಗಾಯತ್ರಿಯ ವರ್ಣಮಾಲಾಸ್ತೋತ್ರದಲ್ಲಿ ವರ್ಣಿತವಾಗಿದೆ. ಇದೆಲ್ಲವನ್ನು ನೋಡಿದರೆ ಗಾಯತ್ರೀ ಮಂತ್ರದಲ್ಲಿ ನಿಗೂಢವಾದ ಪಾಪನಾಶಕ ಶಕ್ತಿ ಅದ್ಭುತ. ಮಾಸಮಹಾತ್ಮೆಯ ಒಂದು ಶ್ಲೋಕ ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರದೇ ಇರಲಾರದು.

"ಯಾ ಶಕ್ತಿಃ ಪಾಪನಿರ್ಹಾರೆ ನಾಮ್ನೋಸ್ತಿ ಮಹತೀವಿಭೋಃ |

ತಾವತ್ ಕರ್ತುಂ ನ ಶಕ್ನೋತಿ ಪಾತಕಂ ಪಾತಕೀಜನಾಃ ||"

"ಪರಮಾತ್ಮನ ನಾಮದಲ್ಲಿದ್ದ ಪಾಪನಾಶಕ ಶಕ್ತಿ ಮೀರಿ ಪಾಪಕೃತ್ಯಗಳನ್ನೆಸಗಲು ಎಂಥ ಪಾತಕಿಗೂ ಸಾಮರ್ಥ್ಯ ಸಾಲದು."

ದ್ವಿಜ ಸಮಾಜಕ್ಕೆ ಮಹಾತ್ಮರಾದ ವಿಶ್ವಾಮಿತ್ರ ಋಷಿಗಳು ಅದೆಂತಹ

ಅಮೂಲ್ಯ ಬಹುಮಾನ (ಕೊಡುಗೆ) ಕೊಟ್ಟಿದ್ದಾರೆ.

ಚತುರ್ವೇದಗಳಲ್ಲಿ ಉಕ್ತವಾದ ಗಾಯತ್ರೀ ಮಂತ್ರದ ಮಹಿಮೆಯ ಉಲ್ಲೇಖವು ಅನೇಕ ಸ್ಮೃತಿಗಳಲ್ಲಿ ವಿರಾಜಮಾನವಾಗಿದೆ. ಬ್ರಹ್ಮಸೂತ್ರಗಳಲ್ಲಿ, ಭಾಗವತದಲ್ಲಿ, ಭಾರತದಲ್ಲಿ, ರಾಮಾಯಣದಲ್ಲಿ, ಇನ್ನೂ ಅನೇಕ ಸ್ಮೃತಿಗಳಲ್ಲಿ ಗಾಯತ್ರೀ ವರ್ಣಿತವಾಗಿದೆ. ಇವುಗಳಿಗೆ ಒಂದಕ್ಕೊಂದು ಸಂಬಂಧವಿದೆ.

ಇಂಥ ಮಹತ್ವಪೂರ್ಣವಾದ ಮಂತ್ರದಿಂದ ಯಾರಾದರೂ ಕೆಲಮಟ್ಟಿಗಾದರೂ ಪ್ರಯೋಜನ (ಫಲ) ಪಡೆದಿದ್ದಾರೆಯೇ ಅಥವಾ ಇದೊಂದು ವಿಹಿತ ಕ್ರಿಯೆಯೆಂದು ಸುಮ್ಮನೆ ಮಾಡುತ್ತ ಹೋಗುತ್ತಿರುವುದೋ ಎಂಬ ಕುತೂಹಲ ಯಾರಿಗಾದರೂ ಬರುವುದು. ಪ್ರಯೋಜನ ಪಡೆದವರು ಬಹಳ ಜನರಿರುವರೆಂದು ಸ್ಮೃತಿ ಇತಿಹಾಸಗಳಿಂದ ತಿಳಿಯುತ್ತದೆ. ಇಲ್ಲಿ ಕೇವಲ ಕೆಲವರ ಹೆಸರನ್ನು ಸ್ಮರಿಸೋಣ.

ಭಾಗವತದ ಪ್ರಥಮ ಸ್ಕಂದದಲ್ಲಿ ವರ್ಣಿತವಾದ, ಪರೀಕ್ಷಿತ ಮಹಾರಾಜನಿಗೆ ಶಾಪಕೊಟ್ಟ ಹತ್ತು ವರ್ಷದ ಶಮೀಕ ಋಷಿಗಳ ಕುಮಾರ ಶೃಂಗಿ ಎಂಬ ಬಾಲಕನಿಗೆ ಅಷ್ಟು ಶಕ್ತಿ ಬಂದದ್ದು ಗಾಯತ್ರೀ ಉಪಾಸನಾಬಲದಿಂದಲೇ.

ಹದಿನಾರನೆಯ ಶತಮಾನದಲ್ಲಿ ಅಕ್ಬರ ಚಕ್ರವರ್ತಿ ಒಬ್ಬ ಭಿಕ್ಷೆ ಬೇಡತಕ್ಕ ಬ್ರಾಹ್ಮಣನನ್ನು ನೋಡಿ ಜಿಗುಪ್ಸೆ ಪಟ್ಟನು. ಇದನ್ನು ಕಂಡ ಬೀರಬಲ್ಲನು, ಬ್ರಾಹ್ಮಣ ಸಮಾಜದ ಮೇಲೆ ಇರುವ ಕೀಳು ಭಾವನೆಯನ್ನು ನಿವಾರಿಸಲು, ಆ ಬ್ರಾಹ್ಮಣನನ್ನು ಕರೆದು ಮುಂದೆ ಭಿಕ್ಷೆಗೆ ಹೋಗಬಾರದೆಂದೂ, ನಿತ್ಯ ಅವಶ್ಯಕ

ಹಣವನ್ನು ತನ್ನಿಂದ ಪಡೆಯಬೇಕೆಂದು ಮತ್ತು ತ್ರಿಕಾಲಗಳಲ್ಲಿ ಗಾಯತ್ರೀ ಅನುಷ್ಠಾನ ಮಾಡಬೇಕೆಂದೂ ತಿಳಿಸಿದನು. ಆ ಪ್ರಕಾರ ಆ ಬ್ರಾಹ್ಮಣನು ಗಾಯತ್ರೀ ಉಪಾಸನೆ ಮಾಡಿ ಅಚಿರಕಾಲದಲ್ಲಿ ಭಗವತ್ಸಾಕ್ಷಾತ್ಕಾರ ಪಡೆದು ದಾರಿದ್ರ್ಯವನ್ನು ನೀಗಿಪರರಿಗೆ ಅಧ್ಯಾತ್ಮ ಮಾರ್ಗದರ್ಶಕನಾದನು. ಕಾಲಾಂತರದಲ್ಲಿ ಬೀರಬಲ್ಲನು ಅವನ ಕೀರ್ತಿಯನ್ನು ಕೇಳಿ ಅವನನ್ನು ಸಂಧಿಸಿ ನಂತರ ಅಕ್ಬರ ಬಾದಶಹನಿಗೆ ತೋರಿಸಿದನು. ಅಕ್ಬರನು ಗಮನಾರ್ಹ ವ್ಯತ್ಯಾಸವನ್ನು ಕಂಡನು. ಬೀರಬಲ್ಲನು ಇದು ಗಾಯತ್ರಿಯ ಅದ್ಭುತ ಶಕ್ತಿ ಎಂದು ಹೇಳಿದನು. ರಾಜನು ಆಶ್ಚರ್ಯ ಪಟ್ಟ. ಪ್ರಭಾವಿತನಾದ. "ಅಕಬರನಾಮ" ಎಂಬ ಗ್ರಂಥ ಒಂದರಲ್ಲಿ ಈ ಘಟನೆಯನ್ನು ಬರೆಸಿದ.

ಹದಿನೆಂಟನೆಯ ಶತಮಾನದಲ್ಲಿ ಶ್ರೀಗೋಪಾಲದಾಸರು (ಭಾಗಣ್ಣದಾಸರು) ಗಾಯತ್ರೀ ಉಪಾಸನೆಯಿಂದ ದಿವ್ಯ ಜ್ಯೋತಿಷ್ಯ ಜ್ಞಾನವನ್ನು ಪಡೆದರು.

ಹತ್ತೊಂಬತ್ತನೆಯ ಶತಮಾನದಲ್ಲಿ ವಿರಜಾನಂದರೆಂಬ ಮಥುರಾ ಪಟ್ಟಣದ ಹುಟ್ಟು ಕುರುಡರು ಗಾಯತ್ರೀ ಉಪಾಸನೆಯಿಂದ ಏಕಸಂಧಿಗ್ರಾಹಿಗಳಾಗಿ ದಿವ್ಯಜ್ಞಾನದೃಷ್ಟಿ ಪಡೆದರು.

ಕೃಷ್ಣಾನಂದರೆಂಬ ಭಾರತ ವ್ಯಾಪಾರಿ, ಆಫ್ರಿಕದಲ್ಲಿದ್ದಾಗ ಬಂದ ದೊಡ್ಡ ವಿಪತ್ತಿನಿಂದ ಕೇವಲ ಇಪ್ಪತ್ತು ನಾಲ್ಕು ಗಂಟೆ ಗಾಯತ್ರೀ ಜಪಮಾಡಿ ಪಾರಾದರು. ನಂತರ ಗಾಯತ್ರೀ ಸಾಕ್ಷಾತ್ಕಾರಕ್ಕೆ ಸನ್ಯಾಸವನ್ನೇ ಸ್ವೀಕರಿಸಿದರು.

ಭಾರತದ ಪ್ರಥಮ ಗವರ್ನರ್ ಜನರಲ್ ಶ್ರೀಚಕ್ರವರ್ತಿ

ರಾಜಗೋಪಾಲಾಚಾರ್ಯರು ಜೈಲುವಾಸದ ಪ್ರತಿಕೂಲ ಸಂದರ್ಭದಲ್ಲಿಯೂ ಗಾಯತ್ರಿಯ ಜಪವನ್ನು ತ್ಯಜಿಸಲಿಲ್ಲ ಎಂದು ತಮ್ಮ ಒಂದು ಕಿರುಹೊತ್ತಿಗೆಯಲ್ಲಿ ಬರೆದಿದ್ದಾರೆ. ಅನುಕೂಲ ಸಂದರ್ಭದಲ್ಲಿ ಗಾಯತ್ರೀ ಉಪಾಸನೆ ಮಾಡಿ ಉತ್ತಮ ಫಲಭಾಗಿಗಳಾಗಿದ್ದಾರೆ. ಅವರ ವಿಚಾರ ಮತ್ತು ಗ್ರಂಥಗಳೇ ಸಾಕ್ಷಿ.

ಹೀಗೆ ಲೆಕ್ಕವಿಲ್ಲದಷ್ಟು ಜನ ತಮಗೆ ಬೇಕಾದ ಫಲಭಾಗಿಗಳಾಗಿದ್ದಾರೆ. ಅಷ್ಟು ಜನ ಅನುಭವಿಗಳ ಅನುಭವ ಕೇಳಿ ನಾವೂ ಸ್ಫೂರ್ತಿಹೊಂದಿ ಶ್ರದ್ದೆಯಿಂದ ಗಾಯತ್ರೀ ಉಪಾಸನೆ ಮಾಡಿದರೆ, ಗಾಯತ್ರೀ ನಾಮಕ ವಿಷ್ಣು - ಶ್ರೀಮನ್ನಾರಾಯಣನು ನಮಗೂ ಅನುಗ್ರಹಿಸುವನೆಂಬ ವಿಷಯದಲ್ಲಿ ಲೇಶ ಸಂದೇಹವೂ ಇಲ್ಲ. (ಈ ಗಾಯತ್ರೀ ಸಿದ್ಧಪುರುಷರ ಉಲ್ಲೇಖವು "ಗಾಯತ್ರೀ ವೈಭವ" ಅಥವಾ "ದಿ ಗ್ಲೋರೀಸ್ ಆಫ್ ಗಾಯತ್ರೀ" ಎಂಬ ಗ್ರಂಥಗಳಲ್ಲಿದೆ. ಇದೇ ಲೇಖಕರಿಂದ ರಚಿತ ಗ್ರಂಥ)

ವೇದಮಾತಾ ಗಾಯತ್ರೀ ಸ್ತುತಿಯೊಂದಿಗೆ ಈ ಪುಟ್ಟ ಲೇಖನವನ್ನು ಮುಗಿಸುವಾ.

ಸ್ತುತಾಮಯಾ ವರದಾ ವೇದಮಾತಾ ।
ಪ್ರಚೋದಯಂ ತಾಂ ಪಾಪಮಾನೀ ದ್ವಿಜಾನಾಂ ॥
ಆಯುಃ ಪ್ರಾಣಂ ಪ್ರಜಾಂ ಪಶುಂ ಕೀರ್ತಿಂದ್ರವಿಣಂ ಬ್ರಹ್ಮವರ್ಚಸಂ ।
ಮಹ್ಯಂದತ್ವಾ ವ್ರಜತ ಬ್ರಹ್ಮಲೋಕಂ ॥ (ಅಥರ್ವವೇದ ೧೯-೭೧-೧)

ಇತಿ

ಓಂ ತತ್ಸತ್

ಶ್ರೀಭಾರತಿರಮಣ ಮುಖ್ಯಪ್ರಾಣಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು

(ಇತಿ ಶ್ರೀಮಧ್ವೇಶಾರ್ಪಣಮಸ್ತು)

---------------------------------------------------------------